**ಸಾಕ್ಷಿಯನ್ನು ದಿನಾಂಕಃ22-07-2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀಃ ವಿ.ಕೆ.ಎಂ ವಾದಿ ಪರ ವಕೀಲರಿಂದಃ**

1. 1968-69 ರ ಕೈ ಬರಹದ ಸರ್ವೇ ನಂ. 33/2 ಎ ರ ಪಹಣಿ ಪತ್ರಿಕೆಯ ದೃಢೀಕೃತ ಪ್ರತಿಯನ್ನು ನಿಪಿ-1 ಎಂದು,

2. 1968-69 ರ ಕೈ ಬರಹದ ಸರ್ವೇ ನಂ. 33/2 ಬಿ ರ ಪಹಣಿ ಪತ್ರಿಕೆಯದೃಢೀಕೃತ ಪ್ರತಿಯನ್ನು ನಿಪಿ-2 ಎಂದು,

3. ಅಂತಕ್ಕೆ ಶೇಡ್ , ವಿಠಲ ಶೆಟ್ಟಿ ದೇವಕಿ ಶೇಡ್ತಿ ಎನ್ನುವವರ ಹೆಸರಿನಲ್ಲಿ ಇರುವ 2018-19 ರ ಕೈ ಬರಹದ ಸರ್ವೇ ನಂ. 33/2 ಎ ರ ಪಹಣಿ ಪತ್ರಿಕೆಯ ಗಣಕೀಕೃತ ಪ್ರತಿಯನ್ನು ನಿಪಿ-3 ಎಂದು,

4. ಅಂತಕ್ಕೆ ಶೇಡ್ , ವಿಠಲ ಶೆಟ್ಟಿ ದೇವಕಿ ಶೇಡ್ತಿ ಎನ್ನುವವರ ಹೆಸರಿನಲ್ಲಿ ಇರುವ 2018-19 ರ ಕೈ ಬರಹದ ಸರ್ವೇ ನಂ. 33/2 ಬಿ ರ ಪಹಣಿ ಪತ್ರಿಕೆಯ ಗಣಕೀಕೃತ ಪ್ರತಿಯನ್ನು ನಿಪಿ-4 ಎಂದು,

5. ದಕ್ಷಿಣ ಕನ್ನಡ ಜಿಲ್ಲೆಯ ಅಪರ ಜಿಲ್ಲಾಧಿಕಾರಿಯವರು ಎಲ್.ಆರ್.ಟಿ ನಂ. 3981/2000-01 ರ ಆದೇಶದ ದೃಢೀಕೃತ ಪ್ರತಿಯನ್ನು ನಿಪಿ-5

6. ಕರ್ನಾಟಕ ಅಪಲೇಟ್ ಟ್ರಿಬ್ಯುನಲ್ ನಲ್ಲಿ ನಾನು ದಾಖಲಿಸಿದ ಅಪೀಲಿನ ದೃಢೀಕೃತ ಪ್ರತಿಯನ್ನು ನಿಪಿ-6

7. ಬಿಪಿನ್ ಚಂದ್ರ ಶೆಟ್ಟಿ ಬಿನ್ ದಿ| ರವೀಂದ್ರ ಶೆಟ್ಟಿ , ಈಶ್ವರಿ ದಾಸ್ ಶೆಟ್ಟಿ ಎನ್ನುವವರ ಹೆಸರಿನಲ್ಲಿ ಇರುವ 2018-19 ರ ಕೈ ಬರಹದ ಸರ್ವೇ ನಂ. 33/2 ಎ ರ ಪಹಣಿ ಪತ್ರಿಕೆಯ ಗಣಕೀಕೃತ ಪ್ರತಿಯನ್ನು ನಿಪಿ-7 ಎಂದು,

8. ಬಿಪಿನ್ ಚಂದ್ರ ಶೆಟ್ಟಿ ಬಿನ್ ದಿ| ರವೀಂದ್ರ ಶೆಟ್ಟಿ , ಈಶ್ವರಿ ದಾಸ್ ಶೆಟ್ಟಿಎನ್ನುವವರ ಹೆಸರಿನಲ್ಲಿ ಇರುವ 2018-19 ರ ಕೈ ಬರಹದ ಸರ್ವೇ ನಂ. 33/2 ಬಿ ರ ಪಹಣಿ ಪತ್ರಿಕೆಯ ಗಣಕೀಕೃತ ಪ್ರತಿಯನ್ನು ನಿಪಿ-8 ಎಂದು,

9. ದಕ್ಷಿಣದ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರು RAP 110/2018–2019/B4 ಪ್ರಕರಣದ ನೋಟೀಸಿನ ಮೂಲ ಪ್ರತಿಯನ್ನು ನಿಪಿ–9 ಎಂದು

10. ದಿಃ 13–04–1965 ರಂದು ಲಕ್ಷ್ಮೀ ಶೇಡ್ತಿಯವರು ತಿಮ್ಮಯ್ಯ ಶೆಟ್ಟಿಯವರಿಗೆ ನೀಡಿದ ಗೇಣಿ ಪಾವತಿಸಿದ ಮೂಲ ರಶೀದಿಯನ್ನು ನಿಪಿ–10

11. ದಿಃ 30–03–1966 ರಂದು ಲಕ್ಷ್ಮೀ ಶೇಡ್ತಿಯವರು ತಿಮ್ಮಯ್ಯ ಶೆಟ್ಟಿಯವರಿಗೆ ನೀಡಿದ ಗೇಣಿ ಪಾವತಿಸಿದ ಮೂಲ ರಶೀದಿಯನ್ನು ನಿಪಿ–11

12. ದಿಃ 31–01–1975 ರಂದು ಪಾವತಿಸಿದ ಭೂಕಂದಾಯದ ರಶೀದಿಯ ಮೂಲ ಪ್ರತಿಯನ್ನು ನಿಪಿ–12

13. ದಿಃ 26–03–1976 ರ ರಂದು ಪಾವತಿಸಿದ ಭೂಕಂದಾಯದ ರಶೀದಿಯ ಮೂಲ ಪ್ರತಿಯನ್ನು ನಿಪಿ–13

14. ದಿಃ 22–02–1977 ರಂದು ಪಾವತಿಸಿದ ಭೂಕಂದಾಯದ ರಶೀದಿಯ ಮೂಲ ಪ್ರತಿಯನ್ನು ನಿಪಿ–14

15. ದಿಃ 19–03–1979 ರಂದು ಪಾವತಿಸಿದ ಭೂಕಂದಾಯದ ರಶೀದಿಯ ಮೂಲ ಪ್ರತಿಯನ್ನು ನಿಪಿ–15

16. ದಿಃ 27–02–1980 ರಂದು ಪಾವತಿಸಿದ ಭೂಕಂದಾಯದ ರಶೀದಿಯ ಮೂಲ ಪ್ರತಿಯನ್ನು ನಿಪಿ–16

17. ದಿಃ 31–03–2012 ರಂದು ಪಾವತಿಸಿದ ಭೂಕಂದಾಯದ ರಶೀದಿಯ ಮೂಲ ಪ್ರತಿಯನ್ನು ನಿಪಿ–17

**ಪಾಟೀಸವಾಲುಃ ಶ್ರೀಃ ಆರ್.ಪಿ.ಎಸ್ , 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ**

1. ನನ್ನ ತಂದೆಯವರ ಹೆಸರು ತಿಮ್ಮಯ್ಯ ಶೆಟ್ಟಿ. ನಮ್ಮ ತಂದೆಯವರಿಗೆ ಎರಡು ಮದುವೆಗಳಾಗಿರುತ್ತವೆ. ನನ್ನ ತಂದೆಯವರು ಮೊದಲ ಪತ್ನಿಯವರ ಹೆಸರು ನನಗೆ

ತಿಳಿದಿರುವುದಿಲ್ಲ. ನಮ್ಮ ತಂದೆಯವರಿಗೆ ಮತ್ತು ಅವರ ಮೊದಲ ಪತ್ನಿಗೆ ಸೀತಾ ಮತ್ತು ವನಜಾ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಾಯಿಯ ಹೆಸರು ಗಿರಿಯಮ್ಮ. ನಮ್ಮ ತಂದೆಯವರಿಗೆ ನಮ್ಮ ತಾಯಿಯಲ್ಲಿ ನಾವು 6 ಜನ ಮಕ್ಕಳು ಹುಟ್ಟಿರುತ್ತೇವೆ. ಅವರ ಹೆಸರು ಕರುಣಾಕರ ಶೆಟ್ಟಿ, ಲಕ್ಷ್ಮೀ, ನಾನು, ಜಯರಾಂ ಶೆಟ್ಟಿ, ಯಶೋಧಾ, ವಾಮಯ್ಯ, ಅಶೋಕ ಎಂದಾಗಿರುತ್ತದೆ. ನಮ್ಮ 6 ಜನರು ಪೈಕಿ ಇಬ್ಬರು ಮರಣ ಹೊಂದಿ ಈಗ 4 ಜನರು ಇದ್ದೇವೆ. ನಮ್ಮ ಅಣ್ಣ ಕರುಣಾಕರ ಶೆಟ್ಟಿ ಮತ್ತು ಲಕ್ಷ್ಮೀ ತೀರಿಕೊಂಡಿರುತ್ತಾರೆ. ಕರುಣಾಕರ ಶೆಟ್ಟಿಯವರಿಗೆ ಹೆಂಡತಿ ಮಕ್ಕಳು ಇರುತ್ತಾರೆ. ನಮ್ಮ ತಂದೆಯವರ ಮೊದಲ ಪತ್ನಿಯ ಮೂಲಕ ಪದ್ಮಯ್ಯ ಶೆಟ್ಟಿ ಎನ್ನುವ ಒಬ್ಬ ಮಗ ಇದ್ದನು. ನಮ್ಮ ತಂದೆಯವರು 1972 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆಯವರ ಮರಣ ದೃಢೀಕರಣ ಪತ್ರ ನನ್ನ ಬಳಿ ಇರುವುದಿಲ್ಲ. ನಮ್ಮ ತಾಯಿಯವರು ಮರಣ ಹೊಂದಿದ ಬಗ್ಗೆ ಅವರ ಮರಣ ದೃಢೀಕರಣ ಪತ್ರ ನನ್ನ ಬಳಿ ಇರುತ್ತದೆ. ನಮ್ಮ ತಾಯಿಯವರು ತೀರಿಕೊಂಡು ಸುಮಾರು 15–20 ವರ್ಷಗಳಾಗಿರಬಹುದು.

2. ದಾವಾ ಆಸ್ತಿಗಳ ಮಾಲೀಕರು ಲಕ್ಷಣಿ ಶೇಡ್ತಿ ಮತ್ತು ಅಂತಕ್ಕ ಶೇಡ್ತಿಯಾಗಿರುತ್ತಾರೆ. ನಾನು ನನ್ನ ಬಾಲ್ಯದಲ್ಲಿ ಲಕ್ಷಣಿ ಶೇಡ್ತಿಯವರನ್ನು ನೋಡಿರುತ್ತೇನೆ. ಮಂಗಳೂರಿನ ಭೂನ್ಯಾಯ ಮಂಡಳಿಯಲ್ಲಿ ನಮ್ಮ ತಾಯಿ ಮತ್ತು ನನ್ನ ಅಣ್ಣ ಕರುಣಾಕರ ಶೆಟ್ಟಿಯವರು ಮತ್ತು ನಮ್ಮ ತಂದೆಯವರ 1 ನೇ ಪತ್ನಿಯಲ್ಲಿ ಹುಟ್ಟಿದ ಪದ್ಮಯ್ಯ ಶೆಟ್ಟಿಯವರು ಸೇರಿಕೊಂಡು ಮೆನ್ನಬೆಟ್ಟು ಗ್ರಾಮದ ಸರ್ವೇ ನಂ. 29, 30, 31 ಮತ್ತು

32 ಕ್ಕೆ ಫಾರಂ ನಂ.7 ರಲ್ಲಿ ಅರ್ಜಿ ಹಾಕಿದ್ದರು. ಭೂನ್ಯಾಯ ಮಂಡಳಿಯ ಭೂಮಾಪಕರು ಸದರಿ ಸ್ಥಳಗಳನ್ನು ಅಳತೆ ಮಾಡಿ, ನಕ್ಷೆ ಬಿಡಿಸಿ ಸ್ವಾಧೀನದ ಬಗ್ಗೆ ತಿಳಿಸಿರುತ್ತಾರೆ. ಭೂನ್ಯಾಯ ಮಂಡಳಿಯವರವು ಸದರಿ 4 ಸರ್ವೇ ನಂಬರುಗಳಲ್ಲಿ ಅರ್ಜಿ ಸಲ್ಲಿಸಿದ ನಮ್ಮ ತಾಯಿ, ಅಣ್ಣ ಮತ್ತು ಪದ್ಮಯ್ಯ ಶೆಟ್ಟಿಯವರಿಗೆ ಜಂಟಿಯಾಗಿ ಸುಮಾರು 6 ಎಕರೆ ಜಾಗವನ್ನು ಮಂಜೂರು ಮಾಡಿದ್ದರು. ಸದರಿ ಅರ್ಜಿಯ ಮೇರೆಗೆ ಭೂಮಾಲೀಕರಾದ ಲಕ್ಷಣಿ ಶೇಡ್ತಿಯವರು ಭೂ ನ್ಯಾಯ ಮಂಡಳಿಯಲ್ಲಿ ಒಪ್ಪಿಗೆ ನೀಡಿದ್ದರು. ಸದರಿ 4 ಸರ್ವೇ ನಂಬರುಗಳಲ್ಲಿ ಒಟ್ಟು 3 ಮನೆಗಳು ಇರುತ್ತವೆ. ನನ್ನ ತಾಯಿ ಮತ್ತು ಕರುಣಾಕರ ಶೆಟ್ಟಿಯವರ ಹೆಸರಿನಲ್ಲಿ ಮಂಜೂರಾದ ಸ್ಥಳದಲ್ಲಿ ಇರುವ ಮನೆ ಯಾವ ಸರ್ವೇ ನಂಬರಿನಲ್ಲಿ ಇರುತ್ತದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಾನು ನನ್ನ ತಂದೆ–ತಾಯಿ ಮತ್ತು ಸಹೋದರ–ಸಹೋದರಿಯರು ಒಂದೇ ಮನೆಯಲ್ಲಿ ವಾಸಮಾಡಿಕೊಂಡಿದ್ದೆವು.

3. ಮೆನ್ನಬೆಟ್ಟು ಗ್ರಾಮದ ಸರ್ವೇ ನಂ. 29, 30, 31 ಮತ್ತು 32 ನಲ್ಲಿ ಇರುವ ಸ್ಥಳಗಳನ್ನು ನಮ್ಮ ತಂದೆ ತಿಮ್ಮಯ್ಯ ಶೆಟ್ಟಿಯವರು ಗೇಣಿಗೆ ಪಡೆದುಕೊಂಡಿದ್ದರು. ಸದರಿ ಸರ್ವೇ ನಂಬರುಗಳಲ್ಲಿ ಇರುವಂತಹ ಮತ್ತೆರುಡು ಮನೆಗಳನ್ನು ಪದ್ಮಯ್ಯ ಶೆಟ್ಟಿಯವರು ಮತ್ತು ಕರುಣಾಕರ ಶೆಟ್ಟಿಯವರು 2009 ನೇ ಸಾಲಿನಲ್ಲಿ ಕಟ್ಟಿಕೊಂಡಿರುತ್ತಾರೆ. ನಾನು ಹಾಲಿ ನಮ್ಮ ತಂದೆಯವರು ಇದ್ದಾಗ ನಾವು ವಾಸಮಾಡಿಕೊಂಡಿದ್ದ ಮನೆಯಲ್ಲಿಯೇ ವಾಸಮಾಡಿ ಕೊಂಡಿದ್ದೇನೆ. ಸದರಿ 6 ಎಕರೆ ಜಮೀನಿನಲ್ಲಿ ನೀವು ಎಷ್ಟು ಜಮೀನನ್ನು ಮಾರಾಟ

ಮಾಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಸುಮಾರು 75 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿರುತ್ತೇವೆ.

4. ನೀವು ಸುಮಾರು 11 ಸಂಟ್ಸ್ ಜಾಗವನ್ನು ಮಿತ್ರ ದಾಸ್ ಸಾಲಿಯಾನ್ ಎನ್ನುವವರಿಗೆ ನಿಮ್ಮ ಉಳಿದ ಸಹೋದರ–ಸಹೋದರಿಯರ ಮುಕ್ತಾರುನಾಮೆ ದಾರನಾಗಿ ದಿಃ 17–08–2009 ಕ್ಕೆ ಮಾರಾಟ ಮಾಡಿರುತ್ತೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾವು ಸದರಿ 75 ಸೆಂಟ್ಸ್ ಸ್ಥಳಗಳಲ್ಲಿ ಕೇಶವ ಪೂಜಾರಿ ಎನ್ನುವವರಿಗೆ ಸುಮಾರು 15 ಸೆಂಟ್ಸ್ ಸ್ಥಳ, ಕೇಶವ ಬಂಗೇರಾ ಎನ್ನುವವರಿಗೆ 25 ಸೆಂಟ್ಸ್ ಸ್ಥಳವನ್ನು ಮತ್ತು ಒಂದು ಕ್ರಿಶ್ಚಿಯನ್ ಖರೀದಿದಾರಿಗೆ ಉಳಿದ ಸ್ಥಳವನ್ನು ಅವರಿಗೆ ಮಾರಾಟ ಮಾಡಿರುತ್ತೇವೆ. ನೀವು 11 ಸೆಂಟ್ಸ್ ಸ್ಥಳವನ್ನು ಮಿತ್ರದಾಸ್ ಸಾಲಿಯಾನ್ ರವರಿಗೆ ದಿಃ 17–09–2009 ರಂದು ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ.

5. ದಾವಾ ಆಸ್ತಿಗಳನ್ನು ನಮ್ಮ ತಂದೆಯವರು ಗೇಣಿಗೆ ಪಡೆದಿರುತ್ತಾರೆ ಎಂದು ತೋರಿಸಲು ನಮ್ಮ ಬಳಿ ಗೇಣಿ ಚೀಟಿಗಳು ಇರುತ್ತವೆ. ದಾವಾ ಆಸ್ತಿಗಳಿಗೆ ನೀವು ಎಷ್ಟು ರೂಪಾಯಿಗಳನ್ನು ಗೇಣಿ ನೀಡುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು 32 ಮುಡಿ ಅಕ್ಕಿಯನ್ನು ಗೇಣಿಯಾಗಿ ನೀಡುತ್ತಿದ್ದೆವು. ಸದರಿ ಗೇಣಿಯನ್ನು ನೀಡಿದ ಬಗ್ಗೆ ರಶೀದಿ ಇರುತ್ತದೆ ಮತ್ತು ಅದನ್ನು ಹಾಜರು ಪಡಿಸಿರುತ್ತೇನೆ. ದಾವಾ ಆಸ್ತಿಗಳಿಗೆ ನೀವು ಗೇಣಿ ನೀಡಿರುತ್ತೀರಿ ಎಂದು ನಿಖರವಾಗಿ ಹೇಳಲು ಏನಾದರೂ ದಾಖಲಾತಿಗಳು ನಿಮ್ಮ ಬಳಿ ಇರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಬಳಿ ಬೇರೆ ದಾಖಲಾತಿಗಳು ಇಲ್ಲ ಎಂದು ನುಡಿಯುತ್ತಾರೆ. ದಾವಾ

ಆಸ್ತಿಗಳನ್ನು 1972 ನೇ ಸಾಲಿನಲ್ಲಿ ಅಂತಕ್ಕೆ ಶೇಡ್ತಿ ಎನ್ನುವವರಿಂದ ಗೇಣಿಗೆ ಪಡೆದುಕೊಂಡಿರುತ್ತೇವೆ. ಅಂತಕ್ಕೆ ಶೇಡ್ತಿಯವರು ನಿಮ್ಮ ಹೆಸರಿಗೆ ಗೇಣಿ ಚೀಟಿಯನ್ನು ನೀಡಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಬಳಿ ಇಲ್ಲ ಆದರೆ ನಮ್ಮ ತಂದೆಯವರಿಗೆ ನೀಡಿತ್ತಿದ್ದರೋ ಇಲ್ಲವೋ ಎಂದು ನನಗೆ ಹೇಳಲು ಸಾಧ್ಯವಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿ ನೀವು ಗೇಣಿಯನ್ನು ನೀಡಿ ಅದಕ್ಕೆ ಅಂತಕ್ಕೆ ಶೇಡ್ತಿಯವರು ನಿಮಗೆ ರಶೀದಿ ನೀಡಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆಯವರು ಗೇಣಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅಂತಕ್ಕೆ ಶೇಡ್ತಿಯವರು ಯಾವ ವರ್ಷ ಮರಣ ಹೊಂದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಲಕ್ಷಣಿ ಶೇಡ್ತಿಯವರು ಅಂತಕ್ಕೆ ಶೇಡ್ತಿಯವರ ಮಗಳಾಗಿರುತ್ತಾರೆ. ಲಕ್ಷಣಿ ಶೇಡ್ತಿಯವರು ಯಾವ ವರ್ಷ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಲಕ್ಷಣಿ ಶೇಡ್ತಿಯವರಿಗೆ ನೀವು ದಾವಾ ಆಸ್ತಿಗೆ ಸಂಬಂಧಿಸಿ ಗೇಣಿಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ನಮ್ಮ ತಂದೆಯವರು ನೀಡಿರುತ್ತಾರೆ.

6. ದಾವಾ ಆಸ್ತಿಗಳ ಗಡಿಗಳನ್ನು ನನಗೆ ಹೇಳಲು ಸಾಧ್ಯವಾಗುವುದಿಲ್ಲ. ದಾವಾ ಆಸ್ತಿಗಳನ್ನು ತೋರಿಸಲು ನಿಮ್ಮ ಬಳಿ ನಕ್ಷೆ ಇರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೆನ್ನಬೊಟ್ಟ ಎನ್ನುವ ಸ್ಥಳದಲ್ಲಿ ಕೊಡೆತ್ತೂರು ಮುಕ್ಕಾ ಎನ್ನುವ ಮುಖ್ಯ ರಸ್ತೆಗೆ ತಾಗಿಕೊಂಡೇ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಒಂದು ಭಾಗದಲ್ಲಿ ವಿಶ್ವನಾಥ ಮಡಿವಾಳ ಎನ್ನುವವರ ಆಸ್ತಿ ಇರುತ್ತದೆ. ಸದರಿ ಸ್ಥಳದಲ್ಲಿ ಅವರ ಮನೆ ಮತ್ತು ಸಿಮೆಂಟ್ ಕಟ್ಟೆಗಳನ್ನು ನಿರ್ಮಿಸುವ

ಕಾರ್ಖಾನೆಗಳು ಇರುತ್ತವೆ. ದಾವಾ ಆಸ್ತಿಯ ಮತ್ತೊಂದು ಬದಿಯಲ್ಲಿ ರಾಜು ಮಾಡಿವಾಳ ರವರ ಮನೆ ಮತ್ತು ಹಿತ್ತಲು ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮತ್ತೊಂದು ಬದಿಯಲ್ಲಿ ಪುಷ್ಪಾ ಶೇಡ್ತಿ ಎನ್ನುವವರ ಮನೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

7. ಲಕ್ಷಣಿ ಶೇಡ್ತಿಯ ಮಗಳಾದ ಉಷಾ ಶೇಡ್ತಿಯನ್ನು ನೀವು ನೋಡಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಉಷಾ ಶೇಡ್ತಿಯವರಿಗೆ ಕೂಡ ನೀವು ಗೇಣಿ ನೀಡಿರುವುದಿಲ್ಲ ಮತ್ತು ಅವರಿಂದ ಗೇಣಿ ಚೀಟಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಉಷಾ ಶೇಡ್ತಿಯವರ ಕುಟುಂಬದಲ್ಲಿ 1966 ನೇ ಸಾಲಿನಲ್ಲಿ ಆದ ವಿಭಾಗದಲ್ಲಿ ಅವರ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉಷಾ ಶೇಡ್ತಿಯವರು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಉಷಾ ಶೇಡ್ತಿಯವರ ಮಕ್ಕಳು ಪ್ರತಿವಾದಿಯರಾಗಿರುತ್ತಾರೆ. ದಾವಾ ಆಸ್ತಿಗಳ ಹಾಲಿ ಮಾಲೀಕರು ಪ್ರತಿವಾದಿಗಳಾಗಿರುತ್ತಾರೆ.

8. ದಾವಾ ಆಸ್ತಿಯು ಮುಳಿ ಹುಲ್ಲು ಬೆಳೆಯುವ ಸ್ಥಳವಾಗಿರುತ್ತದೆ. ದಾವಾ ದಾಖಲಿಸುವ ಕಾಲಕ್ಕೆ ದಾವಾ ಆಸ್ತಿಗಳ ಪಹಣಿಯು ಪ್ರತಿವಾದಿಗಳ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿಯು ಹೌದು. ಸಾಕ್ಷಿಯು ಮುಂದುವರಿದು ಪ್ರತಿವಾದಿಗಳೇ ಯಾವುದೇ ನೋಟೀಸನ್ನು ನೀಡದೇ ಅವರ ಹೆಸರುಗಳನ್ನು ಪಹಣಿಯಲ್ಲಿ ಮಾಡಿಸಿಕೊಂಡಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ.

9. ದಾವಾ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ ನಿಮ್ಮ ತಂದೆಯವರ ಮರಣಾನಂತರ ನಿಮ್ಮ ಹೆಸರನ್ನು ಚಾಲ ಗೇಣಿ ದಾರನೆಂದು ಸೇರಿಸಬೇಕು ಎಂದು ಕೋರುತ್ತಾ ನೀವೇನಾದರೂ ಇಲಾಖೆಗೆ ಅರ್ಜಿ ಸಲ್ಲಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ದಾವಾ ಆಸ್ತಿಗಳಿಗೆ ಸಂಬಂಧಿಸಿ ಸಕ್ಷಮ ಪ್ರಾಧಿಕಾರದಲ್ಲಿ ನಮೂನೆ –7A ರಡಿಯಲ್ಲಿ ನೀವು ಸಲ್ಲಿಸಿದ ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಹೌದು ಸದರಿ ತೀರ್ಪನ್ನು ಪ್ರಶ್ನಿಸುತ್ತಾ ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

10. ದಾವಾ ಆಸ್ತಿಗಳಿಗೆ ಸಂಬಂಧಿಸಿ ನನ್ನ ಅಣ್ಣ ಕರುಣಾಕರ ಶೆಟ್ಟಿಯವರು ಅರ್ಜಿ ಸಲ್ಲಿಸಿದ್ದರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿ ನೀವು ನಮೂನೆ–7A ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಯ ಮಾಲೀಕರು ಯಾರಾಗಿರುತ್ತಾರೆ ಎಂದು ನೀವು ತಿಳಿದುಕೊಂಡಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ–5 ಕ್ಕೆ ಭೂಮಾಲೀಕರ ಹೆಸರು ಮತ್ತು ವಿಳಾಸವನ್ನು ಯಾರು ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಸಲ್ಲಿಸಿದ ಅರ್ಜಿಯ ವಿಚಾರಣೆ ಕಾಲಕ್ಕೆ ಪ್ರತಿವಾದಿಗಳಾಗಲೀ ಅವರ ತಾಯಿಯಾಗಲೀ ಸಕ್ಷಮ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಸಲ್ಲಿಸಿದ ಅರ್ಜಿಯು ಯಾವ ಕಾರಣಕ್ಕೆ ವಜಾಗೊಂಡಿರುತ್ತದೆ ಎಂದು ನಿಮಗೆ ತಿಳಿದಿರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

11. ನಿಪಿ–10 ಮತ್ತು ನಿಪಿ–11 ನಿಮ್ಮ ಸಹೋದರ ಮತ್ತು ನಿಮ್ಮ ತಾಯಿಯವರು ಭೂನ್ಯಾಯ ಮಂಡಳಿಯಲ್ಲಿ ಮೆನ್ನಬೆಟ್ಟು ಗ್ರಾಮದ ಸರ್ವೇ ನಂ. 29, 30, 31 ಮತ್ತು 32 ಕ್ಕೆ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದ ಗೇಣಿ ರಶೀದಿಗಳಾಗಿರುತ್ತವೆ ಎಂದರೆ ಸಾಕ್ಷಿ ಹೌದು. ಮೆನ್ನಬೆಟ್ಟು ಗ್ರಾಮದ ಸರ್ವೇ ನಂ. 32 ಮತ್ತು 33 ಕ್ಕೆ ರಶೀದಿ ಇರುತ್ತದೆಯೇ ಇಲ್ಲವೊ ನನಗೆ ಗೊತ್ತಿಲ್ಲ. ನೀವು ಹಾಜರು ಪಡಿಸಿದ ಗೇಣಿ ರಶೀದಿಗಳು ದಾವಾ ಆಸ್ತಿಗೆ ಸಂಬಂಧಿಸಿದ ರಶೀದಿಗಳಾಗಿರುವುದಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಗೆ ಸಂಬಂಧಪಟ್ಟಿದ್ದು ಆಗಿರಬಹುದು ಎಂದು ನುಡಿಯುತ್ತಾರೆ. ಕರುಣಾಕರ ಶೆಟ್ಟಿಯವರು ಈ ದಿನದಿಂದ 2–3 ವರ್ಷಗಳ ಹಿಂದೆ ಮರಣ ಹೊಂದಿಬಹುದು.

12. ನಿಪಿ–2 ರಿಂದ ನಿಪಿ–17 ರವರೆಗೆ ಇರುವ ರಶೀದಿಗಳು ಮೆನ್ನಬೆಟ್ಟು ಗ್ರಾಮದ ಸರ್ವೇ ನಂ. 29, 30, 31 ಮತ್ತು 32 ಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಮತ್ತು ಸರ್ವೇ ನಂ. 33 ರಕ್ಕೂ ಕೂಡ ಇರಬಹುದು, ನಾವೆಲ್ಲರೂ ಕಂದಾಯವನ್ನು ಪಾವತಿಸಲು ನಮ್ಮ ಅಣ್ಣನಿಗೆ ಹಣವನ್ನು ನೀಡುತ್ತಿದ್ದೆವು. ದಾವಾ ಆಸ್ತಿಗಳಿಗೆ ಸಂಬಂಧಿಸಿ ಯಾವುದೇ ಗೇಣಿ ಚೀಟಿಯನ್ನು ಮತ್ತು ಕಂದಾಯ ರಶೀದಿಗಳನ್ನು ನಿಮ್ಮ ಹೆಸರಿನಲ್ಲಿ ನೀವು ಮಾಡಿಸಿಕೊಂಡಿದ್ದು ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಅಣ್ಣನವರು ಕಂದಾಯ ಪಾವತಿಸುತ್ತಿದ್ದರು, ಇವುಗಳಲ್ಲಿ ಇರಬಹುದು ಎಂದು ನುಡಿಯುತ್ತಾರೆ.

13. ದಾವಾ ಆಸ್ತಿಗಳಲ್ಲಿ ದಾವಾ ಆಸ್ತಿಯು ಪ್ರತಿವಾದಿಗಳಿಗೆ ಸೇರಿರೋ ಆಸ್ತಿಗಳು ಎಂದು ಹೇಳುತ್ತಾ ನಾಮಫಲಕವನ್ನು ಇರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು

ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಪ್ರತಿವಾದಿಗಳು ಭೂಪರಿವರ್ತನೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಹೆಸರು ತೋರಿಸುವಂತಹ ನಾಮ ಫಲಕಗಳನ್ನು ನೀವು ಕಿತ್ತು ಹಾಕಿದ್ದಕ್ಕೆ ನಿಮ್ಮ ವಿರುದ್ಧ ಅವರು 2023 ನೇ ಸಾಲಿನಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸಾಕ್ಷಿಯು ಹೌದು. ನಾನು ದೂರಿಗೆ ಸಂಬಂಧಿಸಿ ಠಾಣೆಯಲ್ಲಿ ಹಾಜರಾಗಿರುತ್ತೇನೆ. ದಾವಾ ಆಸ್ತಿಯ ಮಾಲೀಕತ್ವ ಮತ್ತು ಸಂಪೂರ್ಣ ಸ್ವಾಧೀನವು ಪ್ರತಿವಾದಿಗಳದ್ದೇ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸ್ವಾ ಧೀನ ನಮ್ಮ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಸ್ವಾ ಧೀನ ನಿಮ್ಮ ಬಳಿ ಇರುತ್ತದೆ ಎಂದು ತೋರಿಸಲು ಏನು ದಾಖಲಾತಿ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ದಾಖಲಾತಿ ಇರುವುದಿಲ್ಲ. ಸಾಕ್ಷಿಯು ಮುಂದುವರಿದು ನಾವು ದಾವಾ ಆಸ್ತಿಯಿಂದ ಹುಲ್ಲು ತೆಗೆಯುತ್ತೇವೆ ಮತ್ತು ದನಗಳನ್ನು ಮೇಯಿಸುತ್ತೇವೆ ಎಂದು ನುಡಿಯುತ್ತಾರೆ.

14. ನಾನು ವಾಸಮಾಡಿಕೊಂಡಿರುವ ಮನೆಯಿಂದ ದಾವಾ ಆಸ್ತಿಯು ಸುಮಾರು 100 ರಿಂದ 150 ಮೀಟರ್ ದೂರದಲ್ಲಿ ಇರುತ್ತದೆ. ಈ ದಾವೆಯನ್ನು ದಾಖಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಈ ದಿನ ನನ್ನೊಂದಿಗೆ ನನ್ನ ಮಗ ನ್ಯಾಯಾಲಯದ ಆವರಣದವರೆಗೆ ಬಂದಿರುತ್ತಾನೆ.

15. ಅಕ್ಟೋಬರ್ –2018 ರಂದು ಏನಾದರೂ ಘಟನೆ ಸಂಭವಿಸಿರುತ್ತದೆಯೋ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಪ್ರತಿವಾದಿಗಳು ಸ್ಥಳಕ್ಕೆ

ಪ್ರವೇಶಿಸಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಯಾರು ಬಂದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಬಿಪನ್, ಸುಧೀರ್ ಮತ್ತು ಇತರೆ ಮೂರು ಆ ದಿನ ಸ್ಥಳಕ್ಕೆ ಬಂದಿದ್ದರು. ಸದರಿ ಮೂವರ ಹೆಸರು ನನಗೆ ತಿಳಿದಿರುವುದಿಲ್ಲ. ಅದಕ್ಕೆ ಸಂಬಂಧಿಸಿ ನಾನು ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಪೊಲೀಸರು ನನಗೆ ದೂರಿನ ಪ್ರತಿಯನ್ನು ನೀಡಿರುವುದಿಲ್ಲ. ನೀವು ಠಾಣೆಯಲ್ಲಿ ದೂರು ನೀಡಿರುತ್ತೀರಿ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಿಮ್ಮ ಸಹೋದರರಾಗಲೀ ಅಥವಾ ಪದ್ಮಯ್ಯ ಶೆಟ್ಟಿಯವರಾಗಲೀ ಅವರ ಮಕ್ಕಳಾಗಲೀ ದಾವಾ ಆಸ್ತಿಗಳಿಗೆ ಸಂಬಂಧಿಸಿ ಯಾವುದೇ ವ್ಯಾಜ್ಯವನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮತ್ತು ಅವರ ಸಹೋದರರಿಗೆ ತೊಂದರೆ ಕೊಡುವ ಉದ್ದೇಶದಿಂದ ನೀವು ಈ ಸುಳ್ಳು ದಾವೆಯನ್ನು ನ್ಯಾಯಾಲಯದ ಮುಂದೆ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ.

**(ಮರುವಿಚಾರಣೆ ಇಲ್ಲ.)**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/–

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ. ಮೂಡಬಿದಿರೆ